# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 03-09-2022

## ಚಿಟಗುಪ್ಪಾ ಪೊಲೀ ಠಾಣೆ ಅಪರಾಧ ಸಂಖ್ಯೆ 107/2022 ಕಲಂ 457, 380ಐಪಿಸಿ :-

ದಿನಾಂಕ:02/09/2022 ರಂದು 1830 ಗಂಟೆಗೆ ಫಿರ್ಯಾದಿ ಬಾಬು ತಂದೆ ಚಂದ್ರಪ್ಪ ನರಸಗೊಂಡ, ಸಾ/ ದುಬಲಗುಂಡಿ ಸದ್ಯ ಶಿವನಗರ ಬೀದರ ರವರು ಠಾಣೆಗೆ ಹಾಜರಾಗಿ ಸಲ್ಲಿಸಿದ ದೂರಿನ ಸಾರಂಶವೇನೆಂದರೆ ಇವರು ಆರ್,ಸಿ,ಪಿ,ಜಿ ಸೆಕ್ಯೂರಿಟಿ ಸರ್ವಿಸಸ್ ಪ್ರಾ.ಲಿ.ನಲ್ಲಿ ಪೆಟ್ರೋಲಿಂಗ ಪಟ್ರೋಲಿಂಗ ಗಾರ್ಡ ಅಂತಾ ಕರ್ತವ್ಯ ನಿರ್ವಹಿಸಿಕೊಂಡಿದ್ದು ಬೀದರ ಜಿಲ್ಲೆಯಲ್ಲಿರುವ ಸುಮಾರು 269 ಟವರಿನ ಪೆಟ್ರೊಲಿಂಗ ನೋಡಿಕೊಳ್ಳುತ್ತಿದ್ದು ಹೀಗಿರಲು ದಿನಾಂಕ:01/09/2022 ರಂದು ಬೆಳಗಿನ ಜಾವ 03:15 ಗಂಟೆಗೆ ವಳಖಿಂಡಿ ಗೋಪುರದ ಅಲಾರಾಮ ಬಂದ ಕೂಡಲೇ ತಕ್ಷಣ ಆ ಗೋಪುರಕ್ಕೆ ನಿಯೋಜಿಸಿದಂತಹ ಟೆಕ್ನಿಶಿಯನ ಆನ್ನರಾಜ 7760983426 ಇವರಿಗೆ ಫೋನ ಮಾಡಿ ವಳಕಿಂಡಿ ಟಾವರಿನ ಅಲಾರಾಮ ಬಂದಿದೆ ತಕ್ಷಣ ಹೋಗಿ ನೋಡು ಅಂತಾ ತಿಳಿಸಲು ಆನಂದ ಟೆಕ್ನಿಷನ ಸದರಿ ಗೊಪುರಕ್ಕೆ ಹೋಗಿ ನೋಡಿ ತಿಳಿಸಿದೆನೆಂದರೆ (ಆ:ಆಖ901-ಖಟ-1072839) ಗೂಪುರದ ಬಾಗಿಲು ಕೀಲಿ ಮುರಿದು ಯಾರೋ ಅಪರಿಚಿತ ಕಳ್ಳರು ಗೋಪುರದ ಒಳಗೆ ಹೋಗಿ ಗೋಪೂರಕ್ಕೆ ಅಳವಡಿಸಿದ ಅಮರರಾಜ ಕಂಪನಿಯ 24 ಬ್ಯಾಟರಿಗಳು ಅಂದಾಜು ಕಿಮತ್ತು 24000/- ರೂಪಾಯದು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತ ತಿಳಿಸಿದ ಮೇರೆಗೆ ಫಿರ್ಯಾದಿಯು ಹೋಗಿ ನೋಡಿ ವಿಚಾರಿಸಿದಾಗ ಕಳವು ಆದದ್ದು ಖಚಿತವಾಗಿರುತ್ತದೆ. ಕಳವಿನ ಬಗ್ಗೆ ಅಕ್ಕಪಕ್ಕದ್ದಲ್ಲಿ ವಿಚಾರಿಸಿ ಯಾವುದೇ ಸುಳಿವು ಸಿಗದೇ ಇದ್ದ ಕಾರಣ ಇಂದು ದಿ:02/09/2022 ರಂದು ಠಾಣೆಗೆ ಬಂದು ದೂರು ಸಲ್ಲಿಸಲು ತಡವಾಗಿದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 138/2022 ಕಲಂ 11(ಎ).(ಡಿ)(ಇ)(ಐ)(ಕೆ) ಪ್ರಿವೇನ್ಷನ್ ಆಫ್ ಕ್ರೂವೆಲ್ಟಿ ಟು ಅನಿಮಲ್ ಆಕ್ಟ 1960 & 429 ಐಪಿಸಿ :-

ದಿನಾಂಕ 02.09.2022 ರಂದು 16:30 ಗಂಟೆಗೆ ಶ್ರೀ ಮಂಜನಗೌಡ ಪಾಟೀಲ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಬಾತ್ಮಿ ಬಂದಿದ್ದೇನೆಂದರೆ, ಗೂಡ್ಸ ವಾಹನ ಸಂಖ್ಯೆ ಕೆಎ 56 1333, ಹಾಗೂ ಕೆಎ 38 ಎ 0447 ಮತ್ತು ಕೆ.ಎ 56 5199 ನೇದವುಗಳಲ್ಲಿ ಜಾನುವಾರುಗಳನ್ನು ಅತಿ ಕಡಿಮೆ ಜಾಗೆಯಲ್ಲಿ ಅಡಾತಿಡ್ಡಿಯಾಗಿ ತುಂಬಿ ಬಸವಲ್ಯಾಣ ಕಡೆಯಿಂದ ಜಹಿರಾಬಾದ ಕಡೆ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದಾರೆ ಮಾಹಿತಿ ಬಂದ ಮೆರೆಗೆ ಸಿಬ್ಬದಿಯೊಂದಿಗೆ ಹೋಗಿ ವಾಹನಗಳನ್ನು ತಡೆದು ಮೂರು ವಾಹನಗಳನ್ನು ಅಲ್ಲೆ ಪಕ್ಕದಲ್ಲಿ ಮೊಳಕೇರಾ ಸರ್ವಿಸ್ ರೋಡಿನ ಮೇಲೆ ನಿಲ್ಲಿಸಿ, ವಾಹನದಲ್ಲಿ ಜಾನುವಾರುಗಳು ಇರುವುದನ್ನು ಖಚಿತ ಪಡೆಸಿಕೊಂಡು ಅದರಲ್ಲಿರುವ ಡ್ರೈವರಗಳಿಗೆ ಹಿಡಿದು ಹೆಸರು ಮತ್ತು ವಿಳಾಸ ವಿಚಾರಿಸಲು ಅವರು ತಮ್ಮ ಹೆಸರು 1] ಶೇಕ್ ಸುಲ್ತಾನ ತಂದೆ ಖಾಜಾಮಿಯ್ಯಾ ವಯ:30 ವರ್ಷ ಜಾ:ಮುಸ್ಲಿಂ ಉ:ಡ್ರೈವರ ಸಾ:ಲಾಲ ತಲಾಬಗಲ್ಲಿ ಬಸವಕಲ್ಯಾಣ 2] ಗೌಸೊದ್ದಿನ ತಂದೆ ಇಸ್ಮಾಯಿಲ ಸಾಬ ವಯ:24 ವರ್ಷ ಜಾ:ಮುಸ್ಲಿಂ ಉ:ಡ್ರೈವರ ಸಾ:ಮೆಹೆಬೂಬ ನಗರ ಬಸವಕಲ್ಯಾಣ 3] ಶೇಕ್ ಅಕೆಮ್ಮದ ತಂದೆ ಶೇಕ್ ಸಲೀಮ್ ವಯ:32 ವರ್ಷ ಜಾ:ಮುಡುಬಿ ಗ್ರಾಮ ಅಂತಾ ತಿಳಿಸಿ, ಪುನಃ ಅವರು ತಿಳಿಸಿದೆನೆಂದರೆ, ನಾವು ನಿನ್ನೆ ದಿನಾಂಕ 01.09.2022 ರಂದು ಬಸವಕಲ್ಯಾಣ ತಾಲ್ಲೂಕಿನ ಅಕ್ಕ-ಪಕ್ಕದ ಹಳ್ಳಿಯ ರೈತರಿಂದ ಕಡಿಮೆ ಬೆಲೆಗೆ ಖರೀದಿ ಮಾಡಿದ್ದು, ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಕುರಿತು ಜಹಿರಾಬಾದ ಜಾನುವಾರುಗಳ ಮಾರುಕಟ್ಟೆಗೆ ಸಾಗಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಇವರ ಹತ್ತೀರ ಯಾವುದೆ ಪರವಾನಿಗೆ ಇರುವುದಿಲ್ಲ. ಹಾಗೂ ಜಾನುವಾರುಗಳನ್ನು ಖರೀದಿ ಮಾಡಿದ ರಶೀದಿ ಮನೆಯಲ್ಲಿ ಇರುತ್ತವೆ ಅಂತಾ ತಿಳಿಸಿರುತ್ತಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಭಾಲ್ಕಿ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 142/2022 ಕಲಂ 454, 380 ಐಪಿಸಿ :-

ದಿನಾಂಕ: 02/09/2022 ರಂದು 2000 ಗಂಟೆಗೆ ಫಿರ್ಯಾದಿ ಶ್ರೀ ಅಮುಲ್ ತಂದೆ ಮಧುಕರ ಮೇತ್ರೆ ವಯಸ್ಸು 27 ವರ್ಷ ಜಾ: ಎಸ್,ಟಿ ಗೊಂಡ ಪಿ.ಡಿ.ಓ ಸಾ: ಲಂಜವಾಡ ಗ್ರಾಮ ತಾ: ಭಾಲ್ಕಿ ಸಧ್ಯ: ಗೋಪಿಕಾ ನಗರ ಭಾಲ್ಕಿ ಇವರು ಠಾಣೆಗೆ ಹಾಜರಾಗಿ ಒಂದು ದೂರು ನೀಡಿದ್ದನ್ನು ಸ್ವೀಕರಿಸಿಕೊಂಡು ನೋಡಲಾಗಿ ದೂರಿನ ಸಾರಾಂಶವೇನೆಂದರೆ, ಫಿರ್ಯಾದಿಯು ಗ್ರೇಡ್-1 ಕಾರ್ಯದರ್ಶಿ ಅಂತಾ ಖಟಕ ಚಿಂಚೋಳಿ ಗ್ರಾಮ

ಪಂಚಾತಿಯಲ್ಲಿ ಕರ್ತವ್ಯ ಮಾಡಿಕೊಂಡು ಬಂದಿದ್ದು ಈಗ 20 ದಿವಸಗಳ ಹಿಂದೆ ಗ್ರೇಡ್-1 ಕಾರ್ಯದರ್ಶಿಯಿಂದ ಪಿ.ಡಿ.ಓ ಅಂತಾ ಮುಂಬಡ್ತಿಯಾಗಿ ತುಗಾಂವ [ಹೆಚ್] ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು 4-5 ವರ್ಷಗಳ ಹಿಂದೆ ಭಾಲ್ಕಿಯ ಗೋಪಿಕಾ ನಗರದಲ್ಲಿ ಒಂದು ಹೊಸ ಮನೆ ಕಟ್ಟಿರುತ್ತಾರೆ. ಇವರು ಮನೆಯಲ್ಲಿ ಯಾರು ಇರಲಾರದ 1030 ಗಂಟೆಯಿಂದ ಮಧ್ಯಾನ 2 ಗಂಟೆ ಅವಧಿಯಲ್ಲಿ ಯಾರೊ ಅಪರಿಚತರು ಮನೆಯಲ್ಲಿ ಪ್ರವೇಶ ಮಾಡಿ ಮನೆಯಲ್ಲಿನ ತಾಯಿಯ 4 ತೋಲಿ ಪಾಟ್ಲಿ, 5 ಗ್ರಾಮ ಝುಮಕಾ, ಪೋಹೆಹಾರ 3 ತೋಲಿ, ಝುಮಕಾ 1 ತೋಲಿ, ಮತ್ತು ಪೋಹೆ ಹಾಜರ 3 ತೋಲಿ, ಮಂಗಳಸುತ್ರ 1 ತೋಲಿ, ನನ್ನ ಹೆಂಡತಿಯ ಮತ್ತು ನನ್ನ ಒಂದು ಲಾಕೇಟ 2 ತೋಲಿ ಮತು ಉಂಗುರು 1 ತೋಲಿ ಒಟ್ಟು ಅಂದಾಜು ಕೀಮತ್ತು 6.00000/- ರೂ ಹಾಗೂ ನಗದು ಹಣ 60,000/- ರೂ ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.